ಅ) ಕೆ. ಎಂ. ಸಿ. ಹುಬ್ಬಳ್ಳಿಯಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ ಎಂಬ ವಿಷಯವನ್ನು ಸರ್ಕಾರವು ತಿಳಿದಿದೆಯೇ ?

ಆ) ತಿಳಿದಿದ್ದರೆ ಭೋಧಕ ವರ್ಗದಲ್ಲಿರುವ ಹಾಗೂ ಆಸ್ಪತ್ರೆಗಳಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಏನು ? ಪ್ರತ್ಯೇಕ ವಿವರಣೆಗಳನ್ನು ಒದಗಿಸುವುದು'

ಇ) ಈ ಖಾಲಿ ಬಿಟ್ಟ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಮಾರ್ಗಗಳು.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು

ಅ) ಸರ್ಕಾರಕ್ಕೆ ಕೆ. ಎಂ. ಸಿ ಹುಬ್ಬಳ್ಳಿಯ ಖಾಲಿ ಹುದ್ದೆಗಳ ವಿಷಯವು ಗೊತ್ತಿರುವುದು.

ಆ)

ಶಿಕ್ಷಣ ವಿಭಾಗ		ಆಸ್ಪತ್ರೆ ವಿಭಾಗ	
೧. ಪ್ರಾಧ್ಯಾಪಕರು	೧೩	೧. ಶಸ್ತ್ರಚಿಕಿತ್ಸಕರು	೧೧
೨. ಸಹಾಯಕ ಪ್ರಾಧ್ಯಾಪಕರು	೧೬	೨. ಪದವೀಧರ ಫಾರ್ಮಸಿಸ್ಟ್	೨
೩. ಉಪನ್ಯಾಸಕರು	೪೪	೩. ಲೇ ಸೆಕ್ರೆಟರಿ	೧
೪. ಶೀಘ್ರಲಿಪಿಗಾರರು	೫	೪. ಶೀಘ್ರ ಲಿಪಿಗಾರರು	೧
೫. ಬೆರಳಚ್ಚುಗಾರರು ಎರಡನೇ ದರ್ಜೆ	೨	೫. ಲಿನನ್ ಕೀಪರ್	೧
೬. ಬೆರಳಚ್ಚುಗಾರ ಹಾಗೂ ಲುಗ್ಯಾಣಿ	೨		
೭. ರೆಸಿಡೆಂಟ್ಸ್(ಒಂದನೇ ದರ್ಜೆಯ ಕಿರಿಯ ಆರೋಗ್ಯಾಧಿಕಾರಿಗಳು	೨		

ಇ) ನೇರ ನೇಮಕಾತಿಯಿಂದ ತುಂಬ ಬೇಕಾದ ಹುದ್ದೆಗಳನ್ನು ತುಂಬಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಅಭ್ಯರ್ಥಿಗಳನ್ನು ಆರಿಸಲು ವಿನಂತಿಸಿ ಕೊಳ್ಳಲಾಗಿದೆ. ಬಡ್ತಿಯಿಂದ ತುಂಬ ಬೇಕಾದ ಹುದ್ದೆಗಳನ್ನು ಭರ್ತಿಮಾಡುವ ವಿಷಯವು ಈಗಾಗಲೇ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

Starting of a Primary Health Centre at Kamalapur, Hospet

290 (192) SRI G. SHANKAR GOUD (Hospet).—Will the Minister of State for Health and Family Welfare be pleased to state.

(a) whether it is a fact that there is only one Primary Health Centre at Mariyammanahali of Hospet Taluk,

(b) whether there is any proposal before the Government to start a Primary Health Centre at Kamalapur in Hospet Taluk,

(c) if so, steps taken by Government to start an Health Centre at Kamalapur ?

ಮಾನವಿಗಳು

ವಿಷಯ—ಗಂಗಾರಾಮ್ ಕಟ್ಟಡ ಕಾಂಪ್ಲೆಕ್ಸ್ ಬಗ್ಗೆ

ಶ್ರೀ ಪಿ. ರಾಮ್‌ದೇವ್.—ಅಧ್ಯಕ್ಷರೇ, ಸುಮಾರು ೨೫೦ ಸಾವಿರದ ಪಡೆಗೆ ದಿನಗೂಲಿ ನೌಕರರಿಗೆ ಇಂದು ಬೆಂಗಳೂರಿನಲ್ಲಿ ಬಿಕ್ಷೆ ಬೇಡುವ ಪರಿಸ್ಥಿತಿ ಬಂದಿದೆ. ಈ ವಿಚಾರವನ್ನು ನಾನು ಮಿಲಿನೇ ನಿಯಮ